# ಅಮ್ಯೈರಾಗೆ ಕುಂಗ್‌ಫು ಯೋಗ!

ನಟ ಜಾಕಿ ಚಾನ್ 'ದಿ ಮಿಥ್' ಎಂಬ ಚಿತ್ರದಲ್ಲಿ ಬಾಲಿವುಡ್‌ನ ಮಲ್ಲಿಕಾ ಶೆರಾವತ್ ನಟಿಸಿದ್ದಳು. ಅದು ಬಹುತೇಕ ಭಾರತದಲ್ಲಿಯೇ ಚಿತ್ರೀಕರಣಗೊಂಡ ಚಿತ್ರ. ಹಂಪಿಗೂ ಜಾಕಿ ಚಾನ್ ಮೋಡಿ ವಿಸ್ತರಿಸಿತ್ತು. ಈಗ ಮತ್ತೊಬ್ಬ ಹಿಂದಿ ನಟಿಗೆ ಜಾಕಿ ಚಾನ್ ಜತೆ ತೆರೆ ಹಂಚಿಕೊಳ್ಳುವ ಯೋಗ ಒಲಿದಿದೆ. ಚಿತ್ರದ ಹೆಸರು 'ಕುಂಗ್ ಫು ಯೋಗ'. ಈ ಚಿತ್ರವೂ ಭಾರತ–ಚೀನಾ ನಂಟು ಹೊಂದಿರುವುದರಿಂದ ಬಾಲಿವುಡ್‌ನ ನಟಿಯೇ ಬೇಕು ಎಂದು ಚಿತ್ರತಂಡ ಹುಡುಕಾಟ ನಡೆಸಿತ್ತು. ಆ ಹುಡುಕಾಟದಲ್ಲಿ ಮೊದಲು ಕಣ್ಣಿಗೆ ಬಿದ್ದದ್ದು ಇಲಿಯಾನ ಡಿ ಕ್ರೂಜ್. ಆದರೆ ಅದ್ಯಾಕೋ ಇಲಿಯಾನಗೂ ಕುಂಗ್ ಫುಗೂ ಯೋಗ ಒಲಿದಂತಿಲ್ಲ. ಆಕೆಯ ಜಾಗಕ್ಕೆ ಈಗ ಇಮ್ರಾನ್ ಹಷ್ಮಿ ಜತೆ 'ಮಿ.ಎಕ್ಸ್' ಎಂಬ ಚಿತ್ರದಲ್ಲಿ ನಟಿಸಿದ್ದ ಅಮ್ಯೈರಾ ದಸ್ತುರ್ ಹೆಸರು ಕೇಳಿಬರುತ್ತಿದೆ.

ಈ ಚಿತ್ರದಲ್ಲಿ ಭಾರತದ ಅನೇಕ ನಟರು ನಟಿಸುವ ಸುದ್ದಿ ಇದೆ. ಅದರಲ್ಲಿ ಅಮೀರ್ ಖಾನ್ ಕೂಡ ಒಬ್ಬ. ಆದರೆ ಅಮೀರ್ ಬೇರೆ ಸಿನಿಮಾದಲ್ಲಿ ಬಿಜಿಯಾಗಿರುವುದರಿಂದ ಸೋನು ಸೂದ್ ಆ ಪಾತ್ರದಲ್ಲಿ ನಟಿಸುತ್ತಿದ್ದಾನೆ. ಈಗಾಗಲೇ ಚೀನಾಕ್ಕೆ ಹೋಗಿ ಮರಳಿರುವ ಸೋನು, ಜಾಕಿ ಚಾನ್ ಜೊತೆ ಕ್ಯಾಮೆರಾ ಹಂಚಿಕೊಂಡದ್ದಾಗಿದೆ. ಮುಂದಿನ ಸರದಿ ಅಮ್ಯೈರಾಳದ್ದು. ಮುಂದಿನ ಹಂತದ ಚಿತ್ರೀಕರಣಕ್ಕಾಗಿ ಅಮ್ಯೈರಾ ಚೀನಾಕ್ಕೆ ಹಾರಲಿದ್ದಾಳೆ. ಸ್ಟ್ಯಾನ್ಲಿ ಟಾಂಗ್ ನಿರ್ದೇಶನದ ಈ ಚಿತ್ರದಲ್ಲಿ ಅಮ್ಯೈರಾಗೆ ಪ್ರಮುಖ ಪಾತ್ರವಿದೆ ಎನ್ನಲಾಗುತ್ತಿದೆ. ಆದರೆ ಸದ್ಯಕ್ಕೆ ಆಕೆ ಅದರ ಕುರಿತು ಮಾತನಾಡುತ್ತಿಲ್ಲ. ಮೂರು ವರ್ಷದ ಹಿಂದೆಯೇ ಬಾಲಿವುಡ್‌ಗೆ ಕಾಲಿಟ್ಟಿದ್ದರೂ ಅಮ್ಯೈರಾ ಕಾಣಿಸಿಕೊಂಡಿದ್ದು ಮೂರೇ ಸಿನಿಮಾಗಳಲ್ಲಿ. ಆಕೆಯ 'ಟಿಕೆಟ್ ಟು ಬಾಲಿವುಡ್' ಇನ್ನೂ ತೆರೆಕಾಣಬೇಕಿದೆ. ಆಗಲೇ ಅಮ್ಯೈರಾ ಟಿಕೆಟ್ ಟು ಹಾಲಿವುಡ್ ಎಂದು ನಸುನಗುತ್ತಿದ್ದಾಳೆ!





# ಪಿಗ್ಗಿಯ ಹೆಮ್ಮೆ

'ಜಾಗತಿಕವಾಗಿ ಹೆಸರು ಮಾಡಬೇಕೆಂದರೆ ಅದಕ್ಕೆ ಸೂಕ್ತ ಬೆಲೆ ತೆರಲೇಬೇಕಾಗಿತ್ತು. ಅದನ್ನು ಯಶಸ್ವಿಯಾಗಿ ನಿಭಾಯಿಸಿದ್ದೇನೆ. ಅದು ನನ್ನ ಆಯ್ಕೆಯಾಗಿದ್ದರಿಂದ ನಾನೇ ಹೊಣೆಗಾರಳು ಕೂಡ' ಹೀಗೆ ತನ್ನ ಬಿಡುವಿಲ್ಲದ ಕೆಲಸಗಳಿಂದ ಆಯಾಸವಾಗಿರುವುದು ನಿಜ. ಆದರೆ, ಅದಕ್ಕಿಂತಲೂ ಮಿಗಿಲಾಗಿ ಹೆಮ್ಮೆಯಿದೆ ಎಂದು ಹೇಳಿಕೊಂಡಿರುವುದು ಪ್ರಿಯಾಂಕಾ ಚೋಪ್ರಾ.

ಪಿಗ್ಗಿ ನಟಿಸುತ್ತಿರುವ 'ಕ್ವ್ಯಾಂಟಿಕೊ' ಟೆಲಿವಿಷನ್ ಸರಣಿಗೆ ಅಮೆರಿಕದಲ್ಲಿ ಭಾರಿ ಪ್ರತಿಕ್ರಿಯೆ ವ್ಯಕ್ತವಾಗಿದೆಯಂತೆ. ಇತ್ತ ಬಾಲಿವುಡ್‌ನಲ್ಲಿಯೂ ಆಕೆ ಬಿಜಿ. ಹೀಗಾಗಿ ನಿರಂತರ ಓಡಾಟ, ನಟನೆಯ ಬದುಕು ಆಯಾಸ ಉಂಟು ಮಾಡಿದೆಯಂತೆ. ಆದರೂ ಆ ಕೆಲಸಗಳು ಹೆಮ್ಮೆ ತಂದಿದೆ ಎನ್ನುತ್ತಾಳೆ ಪಿಗ್ಗಿ. ಅಂತರರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿದರೂ ತಾನು ಮೊದಲು ಭಾರತದ ತಾರೆ ಎಂದು ಆಕೆ ಹೇಳಿಕೊಳ್ಳುತ್ತಾಳೆ. ಆಕೆಯಲ್ಲಿ ದೈಹಿಕ ಆಯಾಸ ಕಾಡುತ್ತಿರುತ್ತದೆಯಂತೆ. ಆದರೆ ಪಿಗ್ಗಿಯ ಅಮ್ಮ, 'ನೀನಿನ್ನೂ ಚಿಕ್ಕವಳು. ಕಠಿಣ ಶ್ರಮ ಪಡಲೇಬೇಕು' ಎಂದು ಉತ್ಸಾಹ ತುಂಬಿಸುತ್ತಾರಂತೆ.

ಪ್ರಿಯಾಂಕಾ, ದೀಪಿಕಾ ಪಡುಕೋಣೆ ಜತೆ ನಾಯಕಿಯ ಪಟ್ಟವನ್ನು ಹಂಚಿಕೊಂಡಿರುವ 'ಬಾಜಿರಾವ್ ಮಸ್ತಾನಿ' ಡಿ.18ಕ್ಕೆ ತೆರೆಕಾಣುತ್ತಿದೆ. ಅದರಲ್ಲಿ ಪಿಗ್ಗಿಯದು ಕಾಶಿಬಾಯಿ ಪಾತ್ರ. ಬಿಡುಗಡೆಗೂ ಮುನ್ನವೇ ವಿವಾದವನ್ನೂ ಹುಟ್ಟುಹಾಕಿರುವ ಸಿನಿಮಾದ ಬಗ್ಗೆ ಆಕೆ ಅಪಾರ ನಿರೀಕ್ಷೆ ಹೊಂದಿದ್ದಾಳೆ.

■ ಅಮಿ